# IN THE COURT OF THE ADDL. SENIOR CIVIL JUDGE & JMFC., GUBBI
# OS – 40/2024

Witness present and duly sworn on : 28.06.2025.

Further cross Examination: by Counsel for Defendant No.6 to 10 :

ಸಂಪಯ್ಯನವರ ಕೊನೆಯ ಮಗ ಪಂಚಾಕ್ಷರಯ್ಯನವರಿಗೆ ಸರ್ವೆ ನಂ.57 ರಲ್ಲಿ 1 ಎಕರೆ 33 ಗುಂಟೆ ಅವರ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಪಂಚಾಕ್ಷರಯ್ಯನವರು ಮರಣದ ನಂತರ ಪಾಲಕ್ಷಮ್ಮ ರವರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಅವರು ಕಂದಾಯ ಪಾವತಿ ಮಾಡಿ ಜಮೀನನ್ನು ಅನುಭವಿಸುತ್ತಿದ್ದಾರೆಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬೊರವೆಲ್, ಬೆಳೆ ಬಿಡುವ ತೆಂಗಿನ ಕಾಯಿ ಮತ್ತು ಅಡಿಕೆ ಮರಗಳು ಹಾಗೂ ಜಮೀನಿನ ಸುತ್ತಲು ಮುಳ್ಳು ತಂತಿ ಬೇಲಿ ಹಾಕಿದ್ದಾರೆಂದರೆ ನಾವು ಹಾಕಿರುತ್ತೇವೆ. ಸದರಿ ಜಮೀನಿನ ಪಶ್ಚಿಮ ಭಾಗದಲ್ಲಿ ವಾಹನಗಳ ಓಡಾಟಕ್ಕೆ ಹಾಗೂ ಪಾಲಕ್ಷಮ್ಮನವರ ಮನೆಯವರು ಓಡಾಡಲು ಗೇಟ್ ಇಟ್ಟಿದ್ದಾರೆ ಎಂದರೆ ಸರಿಯಲ್ಲ. ಪಾಲಕ್ಷಮ್ಮನವರ ಜಮೀನಿನ ಉತ್ತರಕ್ಕೆ 6 ನೇ ಪ್ರತಿವಾದಿಯ ಸರ್ವೆ ನಂ.55/3 ಎ ಎಂದರೆ ಸಣ್ಣ ಚಿತ್ತಯ್ಯ. ಸಣ್ಣ ಚಿತ್ತಯ್ಯನವರ ಜಮೀನಿನ ಸರ್ವೆ ನಂ.45 ಮತ್ತು 58. ಸಣ್ಣ ಚಿತ್ತಯ್ಯ ಇರುವುದಿಲ್ಲ ಎಂದರೆ ಮಹಾದೇವಯ್ಯ ರವರು ಖರೀದಿ ಮಾಡಿರುತ್ತಾರೆ. ಪಾಲಕ್ಷಮ್ಮನವರ ಪಶ್ಚಿಮಕ್ಕೆ ಜಯಮ್ಮ ರವರ ಸರ್ವೆ ನಂ.57 ರಲ್ಲಿ 30 ಗುಂಟೆ ಜಮೀನು, ಉತ್ತರಕ್ಕೆ 9 ನೇ ಪ್ರತಿವಾದಿಯ ಸರ್ವೆ ನಂ.57 ರಲ್ಲಿ 1 ಎಕರೆ 33 ಗುಂಟೆ, ದಕ್ಷಿಣಕ್ಕೆ ಶಿವಂಗಗಯ್ಯನವರ ಜಮೀನು ಎಂದರೆ ಸರಿಯಲ್ಲ. 1 ಎಕರೆ 33 ಗುಂಟೆಗೆ ನಮಗೆ ಸಂಭಂದ ಇರುವುದಿಲ್ಲ ಎಂದರೆ ಸರಿಯಲ್ಲ. ಅಣ್ಣ ತಮ್ಮಂದಿರ ಭಾಗದಲ್ಲಿ ಪಂಚಾಕ್ಷರಯ್ಯನವರಿಗೆ ಸರ್ವೆ ನಂ.85 ರಲ್ಲಿ 1 ಎಕರೆ ಬಂದಿತ್ತು ಎಂದರೆ ಸರಿಯಲ್ಲ. ಮೊದಲಿಗೆ ಸಂಪಯ್ಯ ರವರ ಹೆಸರಿಗೆ ಖಾತೆ ಪಹಣಿ ಇದ್ದು, ನಂತರ ಪಂಚಾಕ್ಷರಯ್ಯ ರವರ ಹೆಸರಿಗೆ 1 ಎಕರೆಯ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಪಂಚಾಕ್ಷರಯ್ಯ, ಆತನ ಹೆಂಡತಿ ಪಾಲಾಕ್ಷಮ್ಮ ಹಾಗೂ ಅವರ ಮಗಳಾದ ಶೀಲಾ ರವರು ಸರ್ವೆ ನಂ.85 ರ 1 ಎಕರೆ ಜಮೀನನ್ನು ನಿಟ್ಟೂರಿನ ಎಂ.ಎಸ್

ಸಿದ್ದಗಂಗಮ್ಮ ಕೋಂ ಚಿನ್ನಯ್ಯ ರವರಿಗೆ ದಿನಾಂಕಃ 20.11.2014 ರಂದು ನೊಂದಾಯಿತ ಕ್ರಯಪತ್ರದ ಅಡಿಯಲ್ಲಿ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಎಂ.ಎಸ್ ಸಿದ್ದಗಂಗಮ್ಮ ಈ ದಾವೆಯ 10 ನೇ ಪ್ರತಿವಾದಿ ಗಿರೀಶ್ ರವರ ತಾಯಿ ಎಂದರೆ ಸರಿಯಲ್ಲ. ಕ್ರಯದ ನಂತರ ಸಿದ್ದಗಂಗಮ್ಮ ರವರ ಹೆಸರಿಗೆ ಖಾತೆ ಬದಲಾವಣೆ ಆಯಿತು ಎಂದರೆ ಸರಿಯಲ್ಲ. ಸಿದ್ದಗಂಗಮ್ಮ ರವರು ಸದರಿ 1 ಎಕರೆ ಜಮೀನಿನಲ್ಲಿ ಸ್ವಾಧೀನದದಿಲ್ಲಿ ಇದ್ದರು ಎಂದರೆ ಸ ರಿಯಲ್ಲ.

ಸದರಿ ಜಮೀನನ್ನು ದಿನಾಂಕಃ 24.08.2022 ರಂದು ಸಿದ್ದಗಂಗಮ್ಮ ರವರು 10 ನೇ ಪ್ರತಿವಾದಿಗೆ ನೊಂದಾಯಿತ ದಾನಪತ್ರ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ದಾನಪತ್ರದ ನಂತರ 10 ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಬದಲಾವಣೆ ಆಗಿದೆ ಎಂದರೆ ದೌರ್ಜನ್ಯದಿಂದ ಮಾಡಿರುತ್ತಾರೆ. ಸದರಿ ಖಾತೆ ಪಹಣಿಯನ್ನು ನಾವು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಗಿರೀಶ್ ರವರು ಕಂದಾಯ ಪಾವತಿ ಮಾಡಿ ಜಮೀನನ್ನು ಅಭಿವೃದ್ದಿ ಪಡಿಸಿದ್ದಾರೆಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಗಿರೀಶ್ ರವರು ವಿದ್ಯುಚಕ್ತಿ ಸಂಪರ್ಕ ಪಡೆದು ಬೋರವೆಲ್, ಪಂಪಸೆಟ್ ಮತ್ತು ನೀರಿನ ಟ್ಯಾಂಕ್ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬೆಳೆ ಬಿಡುವ ಅಡಿಕೆ ಮತ್ತು ತೆಂಗು ಇದೆ ಎಂದರೆ ನಾವು ಇಟ್ಟಿರುತ್ತೇವೆ. 10 ನೇ ಪ್ರತಿವಾದಿಯು ಸದರಿ ಜಮೀನನ್ನು ಅಭಿವೃದ್ದಿ ಪಡಿಸಲು ಡಿ.ಸಿ.ಸಿ ಬ್ಯಾಂಕ್ ನಲ್ಲಿ ಸಾಲ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ 1 ಎಕರೆ ಜಮೀನಿನ ಸುತ್ತಲಿಗೆ ಮುಳ್ಳು ತಂತಿ ಬೇಲಿ ಇದೆ ಎಂದರೆ ನಾವು ಹಾಕಿರುತ್ತೇವೆ. ಅದನ್ನು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ 25 ವರ್ಷಗಳ ಹಿಂದೆ ಹಾಕಿರುತ್ತೇವೆ. ಸದರಿ ವಿಚಾರವಾಗಿ ನಾನು ಸುಳ್ಳು ಹೇಳುತ್ತಿದ್ದು, ಈಗಲೂ ಸಹ 10 ನೇ ಪ್ರತಿವಾದಿಯು ಸದರಿ ಜಮೀನಿನಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಜಮೀನಿನಲ್ಲಿ ಕರೇಗೌಡನ ಹಳ್ಳಿಯ ಪಾಲಾಕ್ಷಯ್ಯ ಬಿನ್ ಸಿದ್ದಪ್ಪ ಎಂದರೆ ಚನ್ನಪ್ಪ ಇರುತ್ತಾರೆ. ಸದರಿ ಜಮೀನಿನ ಪಶ್ಚಿಮಕ್ಕೆ 10 ನೇ ಪ್ರತಿವಾದಿಯ ಸರ್ವೆ ನಂ.58/4, 58/6 ಎಂದರೆ ರಾಮಣ್ಣ ಇರುತ್ತಾರೆ. ಸದರಿ ಚಕ್ಕುಬಂದಿ ರಾಮಣಣ ಇರುವುದಿಲ್ಲ ಹಾಗೂ 10 ನೇ ಪ್ರತಿವಾದಿಯ ಬೇರೆ ಜಮೀನುಗಳು ಇವೆ ಎಂದರೆ ಸರಿಯಲ್ಲ. ರಾಮಣ್ಣ ಇದ್ದಾರೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ರಾಮಣ್ಣ ರವರ ಮಕ್ಕಳು 10 ನೇ ಪ್ರತಿವಾದಿಗೆ ಮಾರಾಟ

ಮಾಡಿರುತ್ತರೆ. 1 ಎಕರೆಯ ಉತ್ತರಕ್ಕೆ ಹತ್ತಿಕಟ್ಟೆಯ ಪಾರ್ವತಮ್ಮ ಕೋಂ ಎ.ಎಸ್ ತಿಮ್ಮಯ್ಯ ಎಂದರೆ ನಂಜಪ್ಪ ಇರುತ್ತಾರೆ. ನಂಜಪ್ಪ ರವರು ಇರುವುದಿಲ್ಲ ಹಾಗೂ ಪಾರ್ವತಮ್ಮ ಇದ್ದಾರೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ 6 ನೇ ಪ್ರತಿವಾದಿ ಸರ್ವೆ ನಂ.85 ರಲ್ಲಿ 1 ಎಕರೆ ಎಂದರೆ ಸರ್ವೆ ನಂ.85 ರ 2 ಎಕರೆ ಜಮೀನಿಗೆ ಒಂದು ಚಕ್ಕುಬಂದಿ ಕೊಟ್ಟಿರುತ್ತಾರೆ. ಸರ್ವೆ ನಂ.85 ರಲ್ಲಿ 1 ಎಕರೆ ಜಮೀನು 6 ನೇ ಪ್ರತಿವಾದಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. 1 ಎಕರೆ ಜಮೀನಿನಲ್ಲಿ 10 ನೇ ಪ್ರತಿವಾದಿಯು ಹಕ್ಕುಸ್ವಾಧೀನ ಹೊಂದಿದ್ದು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

6 ರಿಂದ 10 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಎಲ್ಲ ನಿಜಾಂಶ ಗೊತ್ತಿದ್ದರು ಸಹ ಅವುಗಳನ್ನು ಮರೆ ಮಾಚಿ 6 ರಿಂದ 10 ನೇ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಆಸ್ತಿಗಳು ನನ್ನ ತಾತ ಮರಿ ರಂಗಯ್ಯ ರವರ ಆಸ್ತಿ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ಐಟಂ ನಂ.1 ಸರ್ವೆ ನಂ.57 ರ ದಕ್ಷಿಣಕ್ಕೆ ವಾದಿಗಳ ಉಳಿದ ಜಮೀನು ಎಂದು ನಮೂದು ಇದೆ ಎಂದರೆ ಮರಿರಂಗಯ್ಯರವರ ನಂತರ ನಮಗೆ ಬಂದಿರುತ್ತದೆ. ಐಟಂ ನಂ.2 ರ ದಕ್ಷಿಣಕ್ಕೆ ವಾದಿಗಳ ಸರ್ವೆ ನಂ.57 ಎಂದು ನಮೂದು ಇದ್ಧು ಅದರ ವಿಸ್ತೀರ್ಣ ಎಷ್ಟು ಎಂದರೆ 10 ಎಕರೆ 25 ಗುಂಟೆ ಯಲ್ಲಿ 8 ಎಕರೆ ಪಾರ್ವತಮ್ಮ ರವರಿಗೆ ಬಿಟ್ಟಿದ್ದು ಸದರಿ 8 ಎಕರೆ ಜಮೀನನ್ನು ವಾದಿಗಳು ಅನುಭವಿಸುತ್ತಿದ್ದೇವೆ. ದಾವಾ ಐಟಂ ನಂ.2 ರಲ್ಲಿ 10 ಎಕರೆ 25 ಗುಂಟೆ ಮರಿರಂಗಯ್ಯರವರ ಜಮೀನನ್ನು ನಾವು ಅನುಭವಿಸುತ್ತಿದ್ದೇವು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಜೊತೆಯಲ್ಲಿ ಪಾರ್ವತಮ್ಮ ರವರ 8 ಎಕರೆ ಜಮೀನನ್ನು ಸಹ ಅನುಭವಿಸುತ್ತಿದ್ದೇವೆ.

ನಿಪಿ-6 ರಲ್ಲಿ ಎ.ಟಿ ಮಹಾದೇವಯ್ಯ, ಜಯಮ್ಮ ಹಾಗೂ ಹೇಮಾವತಿನಾಲೆ, ಕಾವೇರಿ ನೀರಾವರಿ ನಿಗಮಕ್ಕೆ ಹೋಗಿರುವ ಮ್ಯೂಟೇಷನ್ ? ಆದೇಶವನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನಿಪಿ-8 ರಲ್ಲಿ ಮಹಾದೇವಯ್ಯ ರವರ ಹೆಸರಿಗೆ ಆಗಿರುವ ಮ್ಯೂಟೇಷನ್ ಆದೇಶವನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ . ನಿಪಿ-9 ರಲ್ಲಿ ಗಿರೀಶ್ ಕುಮಾರ ರವರ ಹೆಸರಿಗೆ ಆಗಿರುವ ಮ್ಯೂಟೇಷನ್ ಆದೇಶವನ್ನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಕಂದಾಯ

ಅಧಿಕಾರಿಗಳ ಮುಂದೆ ಪ್ರಶ್ನಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ತಾಲ್ಲೂಕು ಕಛೇರಿಯಲ್ಲಿ ದಾಖಲೆಗಳನ್ನು ಪಡೆದಾಗ ಸದರಿ ರವರ ಹೆಸರುಗಳನ್ನು ನೋಡಿ ಈ ದಾವೆ ಸಲ್ಲಿಸಿದ್ದೇವೆ.

ನಿಪಿ-12 ರಿಂದ 15 ಕಂದಾಯ ರಶೀದಿಗಳು ಈ ದಾವೆಗೆ ಸಂಭಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳನ್ನು ಸುಳ್ಳು ಬರೆಸಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಹಾಗೂ ಸ್ವಾಧೀನ ಇರುವುದಿಲ್ಲ ಹಾಗೂ ಸದರಿ ಆಸ್ತಿಗಳಲ್ಲಿ 6 ರಿಂದ 10 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**<u>Re examination - Nil</u>**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi